ಹಿಂದೂ ಶಕ್ತಿ ಸಮ್ಮೇಳನ ನಾಳೆ

ಧಾರವಾಡ: ಇಲ್ಲಿನ ಕುಮಾರೇಶ್ವರ ನಗರದ ಹಿಂದೂ ಸಮ್ಮೇಳನ ಸಮಿತಿಯಿಂದ ಮಾ. 8ರಂದು ಸಂಜೆ 5.30ಕ್ಕೆ ಕುಮಾರೇಶ್ವರ ನಗರದ ಈಶ್ವರ ದೇವಸ್ಥಾನದ ಆವರಣದ ಹಾನಗಲ್ ಕುಮಾರ ಸ್ವಾಮೀಜಿ ವೇದಿಕೆಯಲ್ಲಿ ಹಿಂದೂ ಶಕ್ತಿ ಸಮ್ಮೇಳನ ಆಯೋಜಿಸಲಾಗಿದೆ ಎಂದು ಸಮಿತಿಯ ಅಧ್ಯಕ್ಷ ಜಿ.ಜಿ. ಹಿರೇಮಠ ತಿಳಿಸಿದರು.

ಜಿ.ಜಿ. ಹಿರೇಮಠ

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದ್ವಾರಪುರದ ಶ್ರೀ ಪರಮಾತ್ಮ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಮುಖ ಹನುಮಂತ ಮಳಲಿ ಮುಖ್ಯಭಾಷಣ ಮಾಡುವರು. ಇದಕ್ಕೂ ಮುನ್ನ ಮಧ್ಯಾಹ್ನ 4 ಗಂಟೆಗೆ ಹೊಸ ಬಸ್ ನಿಲ್ದಾಣದ ಸಿದ್ಧಿವಿನಾಯಕ ದೇವಸ್ಥಾನದಿಂದ ಈಶ್ವರ ದೇವಸ್ಥಾನವರೆಗೆ ಶೋಭಾಯಾತ್ರೆ ಜರುಗಲಿದೆ ಎಂದರು.

ಸಮ್ಮೇಳನ ನಿಮಿತ್ತವಾಗಿ ಮಾ. 7ರಂದು ಸಂಜೆ 4 ಗಂಟೆಗೆ ಧಾರವಾಡ ಡಿಮ್ಹಾನ್ಸ್ ಹತ್ತಿರದ ಈಶ್ವರ ದೇವಸ್ಥಾನದಿಂದ ಹೊರಟು ನಗರದ ಪ್ರಮುಖ ಬೀದಿಗಳಲ್ಲಿ ಬೈಕ್ ರ್‍ಯಾಲಿ ನಡೆಯಲಿದೆ ಎಂದು ತಿಳಿಸಿದರು.

ಸಮಿತಿಯ ಕಾರ್ಯದರ್ಶಿ ಬಾಳೇಶ ಹುಣಶ್ಯಾಳ, ಸದಸ್ಯರಾದ ಸಂತೋಷ ದೇವರಡ್ಡಿ, ವಿಠ್ಠಲ ಅಂಕುಶಕರ, ಶ್ರೀನಿವಾಸ ಕುಲಕರ್ಣಿ ಸುದ್ದಿಗೋಷ್ಠಿಯಲ್ಲಿದ್ದರು.

ಮಹಿಳಾ ದಿನಾಚರಣೆ ವಿಶೇಷ ಉಪನ್ಯಾಸ

ಹುಬ್ಬಳ್ಳಿ: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ವನಸಿರಿ ನಗರದಲ್ಲಿರುವ ಬೆಳಕು ಸಭಾಭವನದಲ್ಲಿ ಮಾ. 8ರಂದು ಬೆಳಗ್ಗೆ 11.30ಕ್ಕೆ ಮಹಾಭಾರತದಲ್ಲಿ ಬರುವ ಪ್ರಮುಖ ಮಹಿಳಾ ಪಾತ್ರಗಳ ಕುರಿತು ವಿಶೇಷ ಉಪನ್ಯಾಸ ಹಮ್ಮಿಕೊಳ್ಳಲಾಗಿದೆ. ಸತ್ತೂರಿನ ನಾರಾಯಣ ಪಾರಾಯಣ ಬಳಗದ ಆಶ್ರಯದಲ್ಲಿ ಡಾ. ರವಿ ಧುಮ್ಮವಾಡ ಕಾರ್ಯಕ್ರಮ ಏರ್ಪಡಿಸಿದ್ದಾರೆ.

ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ಗಜಾನನ ಹೆಗಡೆ ಪಾಲ್ಗೊಳ್ಳುವರು. ಉಪನ್ಯಾಸದ ಪೂರ್ವದಲ್ಲಿ ಬಳಗದ ಸದಸ್ಯರಿಂದ ಶ್ರೀ ಹರಿ ವಾಯು ಗುರುಗಳ ಪಾರಾಯಣ ಜರುಗಲಿದೆ ಎಂದು ಬಳಗದ ಕಾರ್ಯದರ್ಶಿ ರಘೋತ್ತಮ ಅವಧಾನಿ ತಿಳಿಸಿದ್ದಾರೆ.

400ಕ್ಕೂ ಹೆಚ್ಚು ರತಿ- ಕಾಮಣ್ಣರ ಮೂರ್ತಿ ಮೆರವಣಿಗೆ ಇಂದು

ರಂಗಪಂಚಮಿಗೆ ವಾಣಿಜ್ಯನಗರಿ ಸಜ್ಜು

■ ವಿಜಯವಾಣಿ ಸುದ್ದಿಜಾಲ ಹುಬ್ಬಳ್ಳಿ

ವಾಣಿಜ್ಯನಗರಿ ಹುಬ್ಬಳ್ಳಿಯು ಹೋಳಿ ಹುಣ್ಣಿಮೆ ನಿಮಿತ್ತ ಐದನೇ ದಿನ ಆಚರಿಸಲಾಗುವ ರಂಗಪಂಚಮಿಗೆ ಸಂಪೂರ್ಣ ಸಜ್ಜುಗೊಂಡಿದೆ. ಐದು ದಿನಗಳ ವರೆಗೆ ವಿವಿಧೆಡೆ ಪ್ರತಿಷ್ಠಾಪಿಸಲಾಗಿರುವ ರತಿ-ಕಾಮಣ್ಣರ ಮೂರ್ತಿಗಳ ಮೆರವಣಿಗೆ ಹಾಗೂ ಓಕುಳಿಯಾಟ ಶನಿವಾರ ರಂಗೇರಲಿದೆ. ವಿವಿಧ ವಾದ್ಯಮೇಳಗಳು ಹಾಗೂ ಮೂರ್ತಿ ಮೆರವಣಿಗೆಯು ವಿಜೃಂಭಣೆಯಿಂದ ನಡೆಯಲಿದೆ. ನಗರದಲ್ಲಿ 400ಕ್ಕೂ ಹೆಚ್ಚು ಕಡೆ ಕಾಮಣ್ಣನ ಮೂರ್ತಿಗಳ ದಹನ ನಡೆಯಲಿದೆ.

ಎಲ್ಲ ಜಾತಿ, ಧರ್ಮದವರು ರಂಗಿನಾಟದಲ್ಲಿ ತೊಡಗುವುದು ವಾಣಿಜ್ಯನಗರಿಯ ವಿಶೇಷ. ಪರಸ್ಪರ ಬಣ್ಣ ಎರಚಿ ಶುಭಾಶಯ ಕೋರುವುದು ಹಲವು ವರ್ಷಗಳಿಂದ ನಡೆದು ಬಂದ ಸಂಪ್ರದಾಯವಾಗಿದೆ. ಶಾಂತಿಯುತ ಹಾಗೂ ಸೌಹಾರ್ದ ರಂಗಿನಾಟಕ್ಕೆ ಪೊಲೀಸ್ ಇಲಾಖೆ ಕೂಡ ಸಿದ್ಧತೆ ಮಾಡಿಕೊಂಡಿದೆ. ಈಗಾಗಲೇ ಶಾಂತಿ ಸಭೆ ಏರ್ಪಡಿಸಿ ಆಚರಣೆಗೆ ನಿಯಮಾವಳಿಗಳನ್ನು ತಿಳಿಸಲಾಗಿದೆ.

ನಗರದಾದ್ಯಂತ ಜನರು ಹೋಳಿ ಹಬ್ಬ ಆಚರಿಸಲಿದ್ದು, ಅಹಿತಕರ ಘಟನೆಗಳಿಗೆ ಅವಕಾಶವಿಲ್ಲದಂತೆ ಪೊಲೀಸ್ ಇಲಾಖೆ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದೆ. ಪೊಲೀಸ್ ಬಿಗಿ ಬಂದೋಬಸ್ತ್ ಮಾಡಲಾಗಿದೆ. ಸೂಕ್ಷ್ಮ ಹಾಗೂ ಅತೀ ಸೂಕ್ಷ್ಮ ಸ್ಥಳಗಳಲ್ಲಿ ಇಲಾಖೆ ಹದ್ದಿನ ಕಣ್ಣು ಇಟ್ಟಿದೆ. ಚನ್ನಮ್ಮ ವೃತ್ತ, ಸಂಗೊಳ್ಳಿ ರಾಯಣ್ಣ ವೃತ್ತ, ಡಾ. ಬಿ.ಆರ್. ಅಂಬೇಡ್ಕರ್ ವೃತ್ತ, ಸ್ಟೇಷನ್ ರಸ್ತೆ, ದುರ್ಗದ ಬೈಲ್, ಹಳೇಹುಬ್ಬಳ್ಳಿ ವೃತ್ತ, ಇಂಡಿಪಂಪ್ ವೃತ್ತ, ಡಾಕಪ್ಪ ವೃತ್ತ, ಹೊಸೂರು ವೃತ್ತ, ವಾಣಿವಿಲಾಸ ವೃತ್ತ ಸೇರಿದಂತೆ ಕೆಲವು ಪ್ರದೇಶಗಳಲ್ಲಿ ಹೆಚ್ಚಿನ ಸಿಬ್ಬಂದಿ ನಿಯೋಜಿಸಲಾಗಿದೆ. ಕೆಲವೆಡೆ ಮುಂಜಾಗ್ರತೆ ಕ್ರಮವಾಗಿ ನಿಷೇಧಾಜ್ಞೆ ಜಾರಿ ಮಾಡಲಾಗಿದೆ.

ಹುಬ್ಬಳ್ಳಿಯಲ್ಲಿ ರಂಗಪಂಚಮಿ ಹಿನ್ನೆಲೆಯಲ್ಲಿ ಶುಕ್ರವಾರ ಪೊಲೀಸರು ಪಥಸಂಚಲನ ನಡೆಸಿದರು.

ಪೊಲೀಸ್ ಕಮಿಷನರೇಟ್ ವ್ಯಾಪ್ತಿ ಹಾಗೂ ಹೊರ ಜಿಲ್ಲೆ ಸಿಬ್ಬಂದಿ, ಆರ್‌ಎಎಫ್, ಕೆಎಸ್‌ಆರ್‌ಪಿ, ಹೋಮ್‌ಗಾರ್ಡ್ ಸೇರಿ 2500ಕ್ಕೂ ಹೆಚ್ಚು ಸಿಬ್ಬಂದಿ ಕರ್ತವ್ಯ ನಿರ್ವಹಿಸಲಿದ್ದಾರೆ. ಐದು ಡ್ರೋನ್ ಕ್ಯಾಮರಾ, 30ಕ್ಕೂ ಹೆಚ್ಚು ಗುಪ್ತ ಕ್ಯಾಮರಾಮೆನ್‌ಗಳ ಮೂಲಕ ಕಟ್ಟೆಚ್ಚರ ವಹಿಸಲಾಗಿದೆ.

ಪಥ ಸಂಚಲನ: ಹೋಳಿ ಮುಂಜಾಗ್ರತಾ ಕ್ರಮವಾಗಿ ಪೊಲೀಸ್ ಕಮಿಷನರೇಟ್ ವತಿಯಿಂದ ಶುಕ್ರವಾರ ಮೂರುಸಾವಿರ ಮಠದಿಂದ ನಗರದ ಕೆಲವು ಪ್ರದೇಶದಲ್ಲಿ ಪಥ ಸಂಚಲನ ನಡೆಸಲಾಯಿತು. ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿತು. ಆರ್‌ಎಎಫ್ ಸಿಬ್ಬಂದಿಗೆ ಸೂಕ್ಷ್ಮ ಪ್ರದೇಶಗಳ ಜವಾಬ್ದಾರಿ ವಹಿಸಲಾಗಿದೆ. ಸೌಹಾರ್ದದಿಂದ ಹಬ್ಬ ಆಚರಿಸಲು ವಿನಂತಿಸಲಾಗಿದೆ. ಬಲವಂತವಾಗಿ ಯಾರಿಗೂ ಯಾರೂ ಬಣ್ಣ ಹಚ್ಚಬಾರದು. ಮಹಿಳೆಯರಿಗೆ ಚುಡಾಯಿಸುವುದು ಕಂಡು ಬಂದರೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸ್ ಆಯುಕ್ತ ಎನ್. ಶಶಿಕುಮಾರ ಎಚ್ಚರಿಸಿದ್ದಾರೆ.

ಮದ್ಯಪಾನ, ಮದ್ಯ ಮಾರಾಟ ನಿಷೇಧ: ನಗರದಲ್ಲಿ ಮಾ. 7ರಂದು ಹೋಳಿ ಹಬ್ಬ ಆಚರಿಸುವ ಹಿನ್ನೆಲೆಯಲ್ಲಿ ಹುಬ್ಬಳ್ಳಿ ನಗರ ಹಾಗೂ ಗ್ರಾಮೀಣ ತಾಲೂಕಿನಾದ್ಯಂತ ಹಳ್ಳಿಗಳಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಮದ್ಯಪಾನ, ಮದ್ಯ ಮಾರಾಟ, ಸಾಗಾಟವನ್ನು ನಿಷೇಧಿಸಲಾಗಿದೆ.

ಹೆಚ್ಚು ಅನುದಾನವೆಂಬ ತುಪ್ಪ ಮೂಗಿಗೆ ಸವರುವ ಪ್ರಯತ್ನ

ಧಾರವಾಡ: ದೊಡ್ಡ ಮಹಾನಗರ ಪಾಲಿಕೆ ಇದ್ದರೆ ಅನುದಾನ ಹೆಚ್ಚಿಗೆ ಸಿಗುತ್ತದೆ ಎಂಬ ವಿಚಾರವನ್ನು ಕೆಲವರು ಹರಿಬಿಡುತ್ತಿದ್ದಾರೆ. ಇದು ಹೆಚ್ಚು ಅನುದಾನವೆಂಬ ತುಪ್ಪವನ್ನು ಧಾರವಾಡ ಜನತೆಯ ಮೂಗಿಗೆ ಸವರುವ ಪ್ರಯತ್ನ ಎಂದು ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ಹೋರಾಟ ವೇದಿಕೆಯ ವೆಂಕಟೇಶ ಮಾಚಕನೂರ ಹೇಳಿದ್ದಾರೆ.

ಪ್ರಕಟಣೆ ನೀಡಿರುವ ಅವರು, ಸ್ಮಾರ್ಟ್ ಸಿಟಿ ಯೋಜನೆಯಡಿ ಹುಬ್ಬಳ್ಳಿ- ಧಾರವಾಡ ಮಹಾನಗರ ಪಾಲಿಕೆ ಪ್ರತ್ಯೇಕವಾಗಿರದ ಕಾರಣ ಬಂದ 1 ಸಾವಿರ ಕೋಟಿ ರೂಪಾಯಿಯನ್ನು ಹುಬ್ಬಳ್ಳಿಯಲ್ಲಿಯೇ ವಿನಿಯೋಗಿಸಿದರು. ಪ್ರತ್ಯೇಕವಾಗಿದ್ದಲ್ಲಿ ಧಾರವಾಡಕ್ಕೆ ಪ್ರತ್ಯೇಕವಾಗಿ 1 ಸಾವಿರ ಕೋಟಿ ರೂ. ಲಭ್ಯವಾಗುತ್ತಿತ್ತು. ಮುಂದೆಯೂ ಹೀಗೆ ಬಂದ ಅನುದಾನದಲ್ಲಿ ಮುಕ್ಕಾಲು ಪಾಲು ಅನುದಾನವನ್ನು ಹುಬ್ಬಳ್ಳಿಗೆ ಖರ್ಚು ಮಾಡುತ್ತಾರೆ. ಧಾರವಾಡಕ್ಕೆ ಸಿಗುವುದು ಅಷ್ಟಕ್ಕಷ್ಟೇ ಎಂದು ಹೇಳಿದ್ದಾರೆ.

ದೈನಂದಿನ ಪಾಲಿಕೆ ಆಡಳಿತದಲ್ಲಿ ಜಿಲ್ಲಾ ಕೇಂದ್ರವಾದ ಧಾರವಾಡ ಅನುಭವಿಸುತ್ತಿರುವ ಅನನುಕೂಲತೆಗಳ ಕಲ್ಪನೆ ಇವರಿಗಿಲ್ಲ. ಧಾರವಾಡ ಕೊನೆಯವರೆಗೆ ಹುಬ್ಬಳ್ಳಿಯ ಹಿತ್ತಲಾಗಿಯೇ ಉಳಿಯಬೇಕೆಂಬುದು ಇವರ ಆಸೆ. ಈಗಾಗಲೇ ಮಹಾನಗರ ಪಾಲಿಕೆಯ ಆಡಳಿತ ಹುಬ್ಬಳ್ಳಿ ಕೇಂದ್ರಿತವಾಗಿದೆ. ಬೆಂಗಳೂರನ್ನು ವಿಭಜಿಸಿ 5 ಪಾಲಿಕೆಗಳನ್ನಾಗಿ ಮಾಡಲಾಗಿದೆ. ಅದೇ ರೀತಿ ಇಲ್ಲೂ ಎರಡು ಪಾಲಿಕೆಗಳಾಗದೆ ಅಭಿವೃದ್ಧಿ ಸಾಧ್ಯವಿಲ್ಲ. ಧಾರವಾಡದ ಜನರ 4 ವರ್ಷದ ಹೋರಾಟವನ್ನು ಇವರು ಕಡೆಗಣಿಸಿ ಮತ್ತೆ ಈ ಕುರಿತು ಚರ್ಚಿಸಬೇಕೆಂದು ಹೇಳುತ್ತಿದ್ದಾರೆ. ಇದು ಧಾರವಾಡ ನಗರದ ಜನತೆಗೆ ಬಗೆಯುತ್ತಿರುವ ಅನ್ಯಾಯ. ಇದನ್ನು ಎಲ್ಲರೂ ಅರಿಯಬೇಕು ಎಂದು ಮಾಚಕನೂರ ತಿಳಿಸಿದ್ದಾರೆ.

ಶ್ರೀ ರಾಘವೇಂದ್ರ ಸ್ತೋತ್ರಗಳ ಪಾರಾಯಣ

ಹುಬ್ಬಳ್ಳಿ: ವಿಶ್ವಮಧ್ವ ಮಹಾ ಪರಿಷತ್ ನವನಗರ ಘಟಕದ ವತಿಯಿಂದ ಮಾ. 8ರಂದು ಬೆಳಗ್ಗೆ 8.30ಕ್ಕೆ ಅಣುಭಾಷ್ಯ, ವಿಷ್ಣು ಸಹಸ್ರನಾಮ, ಸುಂದರಕಾಂಡ ರಾಮಾಯಣ, ಹರಿವಾಯುಸ್ತುತಿ, ಶ್ರೀ ಜಯತೀರ್ಥ ಸ್ತುತಿ, ಶ್ರೀ ರಘೋತ್ತಮ ಸ್ತೋತ್ರ, ಶ್ರೀ ರಾಘವೇಂದ್ರ ಸ್ತೋತ್ರಗಳ ಪಾರಾಯಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಪಂ. ರಮೇಶ ಆಚಾರ್ಯ ಹಿಪ್ಪರಗಿ, ಪ್ಲಾಟ್ ನಂ. 121, ಜೋಶಿ ಫಾರ್ಮ್ ಹೌಸ್ ಹತ್ತಿರ, ಗಾಮನಗಟ್ಟಿ ರೋಡ್, ಗಂಗಾಧರ ನಗರ, ನವನಗರದಲ್ಲಿ ಪಾರಾಯಣ ನಡೆಯಲಿದ್ದು, ಭಕ್ತರು ಪಾಲ್ಗೊಳ್ಳಬೇಕೆಂದು ಪ್ರಕಟಣೆ ಕೋರಿದೆ.

ಸಾರ್ವಜನಿಕ ನೋಟೀಸು

ನಮ್ಮ ಪಕ್ಷಗಾರರು ನಮಗೆ ಕೊಟ್ಟ ಮಾಹಿತಿ ಮತ್ತು ಅಧಿಕಾರದ ಮೇಲಿಂದ ಈ ಮೂಲಕ ಕೊಡುವ ಸಾರ್ವಜನಿಕ ನೋಟೀಸು ಏನೆಂದರೆ:

ಧಾರವಾಡ ಜಿಲ್ಲಾ ಹುಬ್ಬಳ್ಳಿ ತಾಲೂಕು ಅಯೋಧ್ಯಾ (ವಿ) ಗ್ರಾಮದ ಸರ್ವೆ ನಂ. 157/ಬಿ ರಲ್ಲಿರುವ ಬಿನ್‌ಶೇತ್ಕಿ ಜಮೀನಿನ **ಪ್ಲಾಟ ನಂ. 08**, ಅಳತೆ ಸುಮಾರು 216.55 ಚ.ಮೀ. ಇ-ಸ್ವತ್ತಿನ ನಂ. 5983584670 ನೇದ್ದರ ಮಾಲೀಕರಾದ **ಶ್ರೀಮತಿ ಲತಾ ಕೋಂ. ಗಿರೀಶ ಬಾರೋಚಿಯಾ** @ **ಪಟೇಲ್, ಸಾ॥ ಹುಬ್ಬಳ್ಳಿ** ಇವರಿಂದ ಖರೀದಿಸುವವರಿದ್ದಾರೆ.

ಆದುದರಿಂದ, ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಮೇಲ್ಕಾಣಿಸಿದ ಆಸ್ತಿಯ ಕುರಿತು ಯಾರಾದರೂ ಈ ಒಳಗಾಗಿ ಖರೀದಿ ವ ಹಣಕಾಸು ವ್ಯವಹಾರ ಮಾಡಿದ್ದಲ್ಲಿ ಹಾಗೂ ಏನಾದರೂ ವ್ಯಾಜ್ಯ, ತಂಟೆ, ತಕರಾರು, ಭೋಜಾ ಯಾವುದೇ ಹಕ್ಕು ವ ಹಿತ ಸಂಬಂಧ, ಕ್ಲೇಮು, ಬ್ಯಾಂಕ್ ವ ಸಂಘ ಸಂಸ್ಥೆಗಳು ಭೋಜಾ, ಟ್ಯಾಚು, ಇತರೇ ಸರಕಾರಿ, ಸಹಕಾರಿ ವ ಸಾಹುಕಾರಿ ಲೇಣಿ-ದೇಣಿ ಇತ್ಯಾದಿಗಳು ಏನಾದರೂ ಇದ್ದಲ್ಲಿ, ಈ ನೋಟೀಸು ಪ್ರಕಟವಾದ ಏಳು (7) ದಿನಗಳ ಒಳಗಾಗಿ ಸಂಬಂಧಪಟ್ಟ ಕಾಗದ ಪತ್ರಗಳೊಂದಿಗೆ ಈ ಕೆಳಕಂಡ ವಿಳಾಸಕ್ಕೆ ಬಂದು ಲಿಖಿತ ರೂಪದಲ್ಲಿ ತಕರಾರು ಸಲ್ಲಿಸಬೇಕು. ಇಲ್ಲವಾದಲ್ಲಿ ನಮ್ಮ ಪಕ್ಷಗಾರರು ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಖರೀದಿ ಪತ್ರವನ್ನು ಸಂಬಂಧಪಟ್ಟ ಸಬ್-ರಜಿಸ್ಟ್ರಾರ್ ಕಛೇರಿಯಲ್ಲಿ ನೋಂದ ಮಾಡಿಕೊಳ್ಳುತ್ತಾರೆ. ನಂತರ ಬಂದ ಯಾವುದೇ ತಕರಾರುಗಳು ಸದರ ಆಸ್ತಿಯ ಮತ್ತು ನಮ್ಮ ಪಕ್ಷಗಾರರ ಮೇಲೆ ಯಾವುದೇ ರೀತಿಯಿಂದ ಬಾಂಧಾಯಿಸುವದಿಲ್ಲ ಅಂತಾ ಕೊಟ್ಟ ಸಾರ್ವಜನಿಕ ನೋಟೀಸು.

ಜಿ.ಆರ್.ಪಾಟೀಲ, ವಕೀಲರು,
ಪಾಟೀಲ್ ಲೀಗಲ್ ಸೊಲ್ಯೂಷನ್ಸ್, ಪ್ಲಾಟ ನಂ. 26, ನಿಕೇತನ ಗಾರ್ಡನ,
ಜವಳಿ ಪ್ಲಾಟ, ಕಲ್ಲೂರ ಲೇಔಟ, ಹುಬ್ಬಳ್ಳಿ. ಮೊ : 7411526652

ಹುಬ್ಬಳ್ಳಿ,
06-03-2026

ವಿಜಯವಾಣಿ
ವೀಕೆಂಡ್‌ಶಾಪಿಂಗ್
: ಸಂಪರ್ಕಿಸಿ :
ಹುಬ್ಬಳ್ಳಿ : 8884432301, 8884432303, 8884432341, 9886922116
ಧಾರವಾಡ : 8884432382

Rubber Sheets
Available in rolls
FOR INDUSTRIAL AND DAIRY USE
B.MAHENDRA & BROS.
MAHENDRA CHAMBERS DURGADBAIL FORT HUBLI
0836-2365651
9743068908

ಉತ್ತರ ಕರ್ನಾಟಕದ ನಂ. 1 ಬೋರವೆಲ್ ಕಂಪನಿ
ಶ್ರೀ ವೆಂಕಟೇಶ್ವರ ಬೋರವೆಲ್ಸ್
SRI VENKATESHWARA BOREWELLS
SINCE 1983
4½, 6", 6½ & 7" BOREWELLS
SUPER FAST RIGS
2000 FEET CAPACITY
99029 27516
94480 51338
HEAD OFFICE: U-53, LAXMI COMPLEX, NEELIGIN ROAD, HUBBALLI - 580 029.

Exclusive
Public Seating Collections
Arbiterr
Designed With Purpose
Metro Seating
Comfort Seating
PU Seating
NOW ON DISPLAY
SUN FLOWER FURNITURE STORE
Pujari Kalburgi Platinum, Near The Grand Lawns,
Kusugal Road, Keshwapur, HUBLI
✆ 94481 30314

SF BATTERIES
Automotive Batteries
Inverter Batteries.
AUTHORISED FRANCHISE FOR SF BATTERIES
ADITYA ENTERPRISES
0836-2229206 M. 9845454307
Opp. BVB Engg College, Vidyanagar, P.B. Road, HUBBALLI - 580 031.

बैंक ऑफ़ बड़ौदा Bank of Baroda

Bank of Baroda

H C PATIL BUILDING, NEAR BUS STAND, MORAB,
DHARWAR DISTRICT, MORAB, 580112
Email- vjmora@bankofbaroda.co.in
Tel No: 08380-227236

MORAB BRANCH
ಇ-ಹರಾಜು

ಸ್ಥಿರಾಸ್ತಿಯ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಸೂಚನೆ

2002 ರ ಭದ್ರತಾ ಹಿತಾಸಕ್ತಿ(ಜಾರಿ) ನಿಯಮಗಳ ನಿಯಮ 6(20 ಮತ್ತು 8(6) ರ ಪ್ರಾವಿಸೋಗಳೊಂದಿಗೆ ಓದಿಕೊಳ್ಳಬೇಕಾದ 2002 ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್‌ನಿರ್ಮಾಣ ಹಾಗೂ ಹಿತಾಸಕ್ತಿ ಜಾರಿ ಕಾಯಿದೆಯಡಿ ಇ-ಹರಾಜು. ಸಾರ್ವಜನಿಕರಿಗೆ ವಿಸ್ತಾರವಾಗಿ, ಸಾಲಗಾರನಿ(ರಿ)ಗೆ, ಅಡಮಾನದಾರನಿಗೆ ಹಾಗೂ ಜಾಮೀನುದಾರನಿ(ರಿ)ಗೆ ವಿದಿಷ್ಟವಾಗಿ ಸೂಚನೆ ನೀಡುವುದೇನೆಂದರೆ, ಕೆಳಕಂಡ ಸ್ಥಿರ ಆಸ್ತಿಗಳ ಭದ್ರತಾ ಸಾಲಿಗರಿಗೆ(ಸೆಕ್ಯೂರ್ಡ ಕ್ರೆಡಿಟರ್) ರಿಗೆ ಅಡಮಾನವಾಗಿದ್ದು, ಇದರ ಸ್ವಾಧೀನತೆಯನ್ನು ಸೆಕ್ಯೂರ್ಡ ಕ್ರೆಡಿಟರ್ರವರಾದ ಬ್ಯಾಂಕ್ ಆಫ್ ಬರೋಡದ ಆಧಿಕೃತ ಅಧಿಕಾರಿಗಳು ಪಡೆದುಕೊಂಡಿದ್ದು, ಇವುಗಳನ್ನು ಕೆಳಕಂಡ ಖಾತೆಗಳ ಬಾಕಿ ವಸೂಲಾತಿಗಾಗಿ "ಎಲ್ಲಿ ಹೇಗಿದೆಯೋ ಹಾಗೆಯೇ, ಎಲ್ಲಿ ಏನಿದೆಯೋ ಹಾಗೆಯೇ ಮತ್ತು ಏನು ಉಳಿದಿದೆಯೋ ಅವುಗಳನ್ನು" ಆಧಾರದ ಮೇಲೆ ಮಾರಾಟ ಮಾಡಲಾಗುತ್ತದೆ. ಸಾಲಗಾರರ/ಅಡಮಾನದಾರರ/ಜಾಮೀನುದಾರರ ಭದ್ರತಾ ಆಸ್ತಿಗಳ/ಬಾಕಿ/ಮೀಶಲು ಬೆಲೆ/ಇ-ಹರಾಜು ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಹೆಚ್ಚಿಸಬಹುದಾದ ಮೊತ್ತ ವಿವರಗಳ ಕೆಳಗಿನಂತಿವೆ.

ಕ್ರ.ಸಂ.	ಸಾಲಗಾರರ ಮತ್ತು ಅಡಮಾನವಾಗಿರಿಸಿದ ಆಸ್ತಿಯ ಮಾಲೀಕರ ಹೆಸರು ಮತ್ತು ವಿಳಾಸ	ಸ್ಥಿರಾಸ್ತಿಯ ವಿವರ	ಒಟ್ಟು ಬಾಕಿ	ಇ-ಹರಾಜಿನ ದಿನಾಂಕ ಮತ್ತು ಸಮಯ	1. ಕಾಯ್ದಿರಿಸಿದ ದರ 2. ಇ.ಎಮ್.ಡಿ 3. ಬಿಡ್ ಹೆಚ್ಚಳ ಮೊತ್ತ	ಸ್ವಾಧೀನತೆ ವಿವರ	ಆಸ್ತಿ ಪರಿಶೀಲನೆ ದಿನಾಂಕ ಮತ್ತು ಸಮಯ
1	1. ಶ್ರೀ ವಿಠ್ಠಲ ತಂದೆ ರಾಮಪ್ಪ ತೆಂಬದವರ 2. ಶ್ರೀ ಈಗಪ್ಪ ತಂದೆ ವಿಠ್ಠಲ ತೆಂಬದವರ ಇಬ್ಬರೂ ಈ ವಿಳಾಸದಲ್ಲಿ ವಾಸವಾಗಿದ್ದಾರೆ: ಗುಮ್ಮಗೋಳ ಗ್ರಾಮ, ನವಲಗುಂದ ತಾಲೂಕ, ಜಿ: ಧರವಾಡ-581201	ಹಳೆಯ ವಿಪಿಸಿ ನಂ 455, ಸರ್ವೆ ನಂ 1/1B, ಇ-ಆಸ್ತಿ ನಂ 151300500400101151, ಗುಮ್ಮಗೋಳ ಗ್ರಾಮ, ತಾ: ನವಲಗುಂದ, ಜಿ:ಧಾರವಾಡದಲ್ಲಿರುವ ದಲ್ಲಿರುವ 178 ಚ.ಮೀ. ಅಥವಾ 1916 ಚ.ಅಡಿ ವಿಸ್ತೀರ್ಣವಿರುವ ವಾಸಯೋಗ್ಯ ಆಸ್ತಿ	ರೂ 10,12,472.44/- ಮತ್ತು ಬಡ್ಡಿ ಮತ್ತು ವೆಚ್ಚಗಳು	ಇ-ಹರಾಜಿನ ದಿನಾಂಕ 15-04-2026 ಸಮಯ: ಬೆಳಿಗ್ಗೆ 10.00ರಿಂದ ಸಂಜೆ 5.00 ರ ವರೆಗೆ	1. ರೂ 7,75,000/- 2. ರೂ 77,500 3. ರೂ 10,000/-	ಚಿಹ್ನಾತ್ಮಕ ಸ್ವಾಧೀನತೆ	14/04/2026 ಬೆಳಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 4.00 ಗಂಟೆ ವರೆಗೆ

ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ https://www.bankofbaroda.in/e-auction.htm, Baanknet.com ವೆಬ್ ಸೈಟನ್ನು ನೋಡಿ.. ಹೆಚ್ಚಿನ ಮಾಹಿತಿಗಾಗಿ ಶಾಖೆ ವ್ಯವಸ್ಥಾಪಕರು - ಅಥವಾ ಅಧಿಕೃತ ಅಧಿಕಾರಿಗಳನ್ನು 7524028284 ರಲ್ಲಿ ಸಂಪರ್ಕಿಸಿ

ದಿನಾಂಕ: 05-03-2026
ಸ್ಥಳ: ಹುಬ್ಬಳ್ಳಿ

ಸಹಿ/- ಅಧಿಕೃತ ಅಧಿಕಾರಿಗಳು,
ಬ್ಯಾಂಕ್ ಆಫ್ ಬರೋಡ್

बैंक ऑफ़ बड़ौदा Bank of Baroda

Bank of Baroda

Regional Office Stressed Asset Recovery
Branch (Hubballi): 2nd Floor, Bellad
Tower, Bannigida Stop, Gokul Road,
Hubballi-580030, Karnataka, India.
Email - sarhub@bankofbaroda.com

SAUNSHI BRANCH
ಇ-ಹರಾಜು

ಇ-ಹರಾಜು ಮಾರಾಟ ಸೂಚನೆ

2002 ರ ಭದ್ರತಾ ಹಿತಾಸಕ್ತಿ(ಜಾರಿ) ನಿಯಮಗಳ ನಿಯಮ 6(20 ಮತ್ತು 8(6) ರ ಪ್ರಾವಿಸೋಗಳೊಂದಿಗೆ ಓದಿಕೊಳ್ಳಬೇಕಾದ 2002 ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್‌ನಿರ್ಮಾಣ ಹಾಗೂ ಹಿತಾಸಕ್ತಿ ಜಾರಿ ಕಾಯಿದೆಯಡಿ ಇ-ಹರಾಜು.

ಸಾರ್ವಜನಿಕರಿಗೆ ವಿಸ್ತಾರವಾಗಿ, ಸಾಲಗಾರನಿ(ರಿ)ಗೆ, ಅಡಮಾನದಾರನಿಗೆ ಹಾಗೂ ಜಾಮೀನುದಾರನಿ(ರಿ)ಗೆ ವಿದಿಷ್ಟವಾಗಿ ಸೂಚನೆ ನೀಡುವುದೇನೆಂದರೆ, ಕೆಳಕಂಡ ಸ್ಥಿರ ಆಸ್ತಿಗಳ ಭದ್ರತಾ ಸಾಲಿಗರಿಗೆ(ಸೆಕ್ಯೂರ್ಡ ಕ್ರೆಡಿಟರ್) ರಿಗೆ ಅಡಮಾನವಾಗಿದ್ದು, ಇದರ ಸ್ವಾಧೀನತೆಯನ್ನು ಸೆಕ್ಯೂರ್ಡ ಕ್ರೆಡಿಟರ್ರವರಾದ ಬ್ಯಾಂಕ್ ಆಫ್ ಬರೋಡದ ಆಧಿಕೃತ ಅಧಿಕಾರಿಗಳು ಪಡೆದುಕೊಂಡಿದ್ದು, ಇವುಗಳನ್ನು ಕೆಳಕಂಡ ಖಾತೆಗಳ ಬಾಕಿ ವಸೂಲಾತಿಗಾಗಿ **"ಎಲ್ಲಿ ಹೇಗಿದೆಯೋ ಹಾಗೆಯೇ, ಎಲ್ಲಿ ಏನಿದೆಯೋ ಹಾಗೆಯೇ ಮತ್ತು ಏನು ಉಳಿದಿದೆಯೋ ಅವುಗಳನ್ನು"** ಆಧಾರದ ಮೇಲೆ ಮಾರಾಟ ಮಾಡಲಾಗುತ್ತದೆ. ಸಾಲಗಾರರ/ಅಡಮಾನದಾರರ/ಜಾಮೀನುದಾರರ ಭದ್ರತಾ ಆಸ್ತಿಗಳ/ಬಾಕಿ/ಮೀಶಲು ಬೆಲೆ/ಇ-ಹರಾಜು ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಹೆಚ್ಚಿಸಬಹುದಾದ ಮೊತ್ತ ವಿವರಗಳ ಕೆಳಗಿನಂತಿವೆ.

ಕ್ರ. ಸಂ ಖ್ಯೆ	ಸಾಲಗಾರರ ಮತ್ತು ಅಡಮಾನವಾಗಿರಿಸಿದ ಆಸ್ತಿಯ ಮಾಲೀಕರ ಹೆಸರು ಮತ್ತು ವಿಳಾಸ	ಸ್ಥಿರಾಸ್ತಿಯ ವಿವರ	ಒಟ್ಟು ಬಾಕಿ	ಇ-ಹರಾಜಿನ ದಿನಾಂಕ ಮತ್ತು ಸಮಯ	1. ಕಾಯ್ದಿರಿಸಿದ ದರ 2. ಇ.ಎಮ್.ಡಿ 3. ಬಿಡ್ ಹೆಚ್ಚಳ ಮೊತ್ತ ____/-	ಸ್ವಾಧಿನತೆ ವಿವರ	ಆಸ್ತಿ ಪರಿಶೀಲನೆ ದಿನಾಂಕ ಮತ್ತು ಸಮಯ
1 2	1) ಶ್ರೀ ಫಕ್ಕೀರಪ್ಪ ಆರ್ ಶಿಶುನಾಳ 2) ಶ್ರೀಮತಿ ಸಣ್ಣವ್ವ ಎಫ್ ಶಿಶುನಾಳ, 3) ಶ್ರೀ ರಾಮಪ್ಪ ಎಫ್ ಶಿಶುನಾಳ 4) ಶ್ರೀ ಬ್ರಹ್ಮಾನಂದ ಎಫ್ ಶಿಶುನಾಳ ಎಲ್ಲರೂ ಈ ಕೆಳಗಿನ ವಿಳಾಸದಲ್ಲಿ ವಾಸಿಸುತ್ತಾರೆ ಮನೆ ನಂ 967/ಬಿ/1ಎ ವಾರ್ಡ ನಂ 3, ಪೆಟ್ರೋಲ್ ಬಂಕ್ ಪಕ್ಕದಲ್ಲಿ, ಸಂಶಿ-58117	(ಸ್ಥಿರಾಸ್ತಿ) ಪಂಚಾಯತ ಪ್ಲಾಟ್ ನಂ. 967/B/1A, ಹೊಸ ನಂ 151300400500103925, ಸಂಶಿ ಗ್ರಾಮ, ಕುಂದಗೋಳ-581117ದಲ್ಲಿರುವ 404.54 ಚ.ಮೀ ಆಸ್ತಿ	ರೂ 9,19,708/- ಮತ್ತು ಬಡ್ಡಿ ಮತ್ತು ವೆಚ್ಚಗಳು ದಿನಾಂಕ 05-03-2026 ರಿಂದ ಅನ್ವಯವಾಗುವಂತೆ	ಇ-ಹರಾಜಿನ ದಿನಾಂಕ 09-04-2026 ಸಮಯ: ಬೆಳಿಗ್ಗೆ 10.00 ರಿಂದ ಸಂಜೆ 5.00 ರ ವರೆಗೆ	1.ರೂ 24,42,500 2.ರೂ 2,44,250/- 3. ರೂ 25,000/-	ಭೌತಿಕ ಸ್ವಾಧೀನತೆ	05/03/2026 ಬೆಳಗ್ಗೆ 11.00

ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ https://www.bankofbaroda.in/e-auction.htm, Baanknet.com ವೆಬ್‌ಸೈಟನ್ನು ನೋಡಿ. ಹೆಚ್ಚಿನ ಮಾಹಿತಿಗಾಗಿ ಶಾಖೆ ವ್ಯವಸ್ಥಾಪಕರು - ಅಥವಾ ಅಧಿಕೃತ ಅಧಿಕಾರಿಗಳನ್ನು 9421401641 ರಲ್ಲಿ ಸಂಪರ್ಕಿಸಿ

ದಿನಾಂಕ: 05-03-2026
ಸ್ಥಳ: ಸಂಶಿ

ಸಹಿ/- ಅಧಿಕೃತ ಅಧಿಕಾರಿಗಳು
ಬ್ಯಾಂಕ್ ಆಫ್ ಬರೋಡ

बैंक ऑफ़ बड़ौदा Bank of Baroda

Bank of Baroda

Navanagar, Hubli-580025
Email:vjnadh@bankofbaroda.co.in

NAVANAGAR BRANCH
ಇ-ಹರಾಜು

ಇ-ಹರಾಜು ಮಾರಾಟ ಸೂಚನೆ

2002 ರ ಭದ್ರತಾ ಹಿತಾಸಕ್ತಿ(ಜಾರಿ) ನಿಯಮಗಳ ನಿಯಮ 6(2) ಮತ್ತು 8(6) ರ ಪ್ರಾವಿಸೋಗಳೊಂದಿಗೆ ಓದಿಕೊಳ್ಳಬೇಕಾದ 2002 ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್‌ನಿರ್ಮಾಣ ಹಾಗೂ ಹಿತಾಸಕ್ತಿ ಜಾರಿ ಕಾಯಿದೆಯಡಿ ಇ-ಹರಾಜು.

ಸಾರ್ವಜನಿಕರಿಗೆ ವಿಸ್ತಾರವಾಗಿ, ಸಾಲಗಾರನಿ(ರಿ)ಗೆ, ಅಡಮಾನದಾರನಿಗೆ ಹಾಗೂ ಜಾಮೀನುದಾರನಿ(ರಿ)ಗೆ ವಿದಿಷ್ಟವಾಗಿ ಸೂಚನೆ ನೀಡುವುದೇನೆಂದರೆ, ಕೆಳಕಂಡ ಸ್ಥಿರ ಆಸ್ತಿಗಳ ಭದ್ರತಾ ಸಾಲಿಗರಿಗೆ (ಸೆಕ್ಯೂರ್ಡ ಕ್ರೆಡಿಟರ್) ರಿಗೆ ಅಡಮಾನವಾಗಿದ್ದು, ಇದರ ಸ್ವಾಧೀನತೆಯನ್ನು ಸೆಕ್ಯೂರ್ಡ ಕ್ರೆಡಿಟರ್ರವರಾದ ಬ್ಯಾಂಕ್ ಆಫ್ ಬರೋಡದ ಆಧಿಕೃತ ಅಧಿಕಾರಿಗಳು ಪಡೆದುಕೊಂಡಿದ್ದು, ಇವುಗಳನ್ನು ಕೆಳಕಂಡ ಖಾತೆಗಳ ಬಾಕಿ ವಸೂಲಾತಿಗಾಗಿ **"ಎಲ್ಲಿ ಹೇಗಿದೆಯೋ ಹಾಗೆಯೇ, ಎಲ್ಲಿ ಏನಿದೆಯೋ ಹಾಗೆಯೇ ಮತ್ತು ಏನು ಉಳಿದಿದೆಯೋ ಅವುಗಳನ್ನು"** ಆಧಾರದ ಮೇಲೆ ಮಾರಾಟ ಮಾಡಲಾಗುತ್ತದೆ. ಸಾಲಗಾರರ/ಅಡಮಾನದಾರರ/ಜಾಮೀನುದಾರರ ಭದ್ರತಾ ಆಸ್ತಿಗಳ/ಬಾಕಿ/ಮೀಶಲು ಬೆಲೆ/ಇ-ಹರಾಜು ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಹೆಚ್ಚಿಸಬಹುದಾದ ಮೊತ್ತ ವಿವರಗಳ ಕೆಳಗಿನಂತಿವೆ.

ಕ್ರ. ಸಂ ಖ್ಯೆ	ಸಾಲಗಾರರ ಮತ್ತು ಅಡಮಾನವಾಗಿರಿಸಿದ ಆಸ್ತಿಯ ಮಾಲೀಕರ ಹೆಸರು ಮತ್ತು ವಿಳಾಸ	ಸ್ಥಿರಾಸ್ತಿಯ ವಿವರ	ಒಟ್ಟು ಬಾಕಿ	ಇ-ಹರಾಜಿನ ದಿನಾಂಕ ಮತ್ತು ಸಮಯ	1. ಕಾಯ್ದಿರಿಸಿದ ದರ 2. ಇ.ಎಮ್.ಡಿ 3. ಬಿಡ್ ಹೆಚ್ಚಳ ಮೊತ್ತ ____/-	ಸ್ವಾಧಿನತೆ ವಿವರ	ಆಸ್ತಿ ಪರಿಶೀಲನೆ ದಿನಾಂಕ ಮತ್ತು ಸಮಯ
1	ಶ್ರೀ ನಾಗೇಶ ವಸಂತ ಬೆಳವಟಗಿ(ಸಾಲಗಾರರು) ವಿಳಾಸ: ಪ್ಲಾಟ್ ನಂ 1017, ಮೊದಲನೇ ಮಹಡಿ, ಬಳಿಗಾರ ಓಣಿ, ಜನನಿ ಶೋರೂಮ್ ಹಿಂದುಗಡೆ, ಉಣಕಲ್ ಲೇಕ್, ಹುಬ್ಬಳ್ಳಿ-580031	ಆರ್ ಎಸ್ ನಂ 13/4ರಲ್ಲಿ ರಚಿಸಿದ ಪ್ಲಾಟ್ ನಂ 14, ಆಸ್ತಿ ನಂ 151300200400125591, ಕುಸುಗಲ್ ಗ್ರಾಮ ಪಾಂಚಾಯತ, ತಾ: ಹುಬ್ಬಳ್ಳಿ, ಜೀ:ಧಾರವಾಡದಲ್ಲಿರುವ ಪೂರ್ವ-ಪಶ್ಚಿಮ: 9.00 ಮೀ, ಉತ್ತರ-ದಕ್ಷಿಣ: 10.975 ಮೀ, ಒಟ್ಟು 98.78 ಚ.ಮೀ ಆಸ್ತಿ ಎಲ್ಲ ಸ್ವತ್ತುಗಳೊಂದಿಗೆ.	ರೂ 22,83,608.27/- ಮತ್ತು ಬಡ್ಡಿ ಮತ್ತು ವೆಚ್ಚಗಳು	ಇ-ಹರಾಜಿನ ದಿನಾಂಕ 23-03-2026 ಸಮಯ: ಬೆಳಿಗ್ಗೆ 10.30ರಿಂದ ಸಂಜೆ 5.00 ರ ವರೆಗೆ 23-03-2026 ಬೆಳಿಗ್ಗೆ 10.30ರಿಂದ ಸಂಜೆ 5.00 ರ ವರೆಗೆ	1.ರೂ 14,00,000/- 2. ರೂ 1,40,000 3. ರೂ 25,000/-	ಭೌತಿಕ ಸ್ವಾಧೀನತೆ	18-03-2026 ಬೆಳಗ್ಗೆ 11.00 ಗಂಟೆಯಿಂದ 20-03-2026 ಸಂಜೆ 5.00 ಗಂಟೆ ವರೆಗೆ (ರಜಾ ದಿನಗಳನ್ನು ಹೊರತುಪಡಿಸಿ)
2	ಫಕ್ಕೀರಯ್ಯ ರುದ್ರಯ್ಯ ಉಡವಯ್ಯನಮಠ(ಸಹ-ಸಾಲಗಾರರು) ವಿಳಾಸ: ಪ್ಲಾಟ್ ನಂ 1017, ಮೊದಲನೇ ಮಹಡಿ, ಬಳಿಗಾರ ಓಣಿ, ಜನನಿ ಶೋರೂಮ್ ಹಿಂದುಗಡೆ, ಉಣಕಲ್ ಲೇಕ್, ಹುಬ್ಬಳ್ಳಿ-580031						

ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ https://www.bankofbaroda.in/e-auction.htm, Baanknet.com ವೆಬ್ ಸೈಟನ್ನು ನೋಡಿ.. ಹೆಚ್ಚಿನ ಮಾಹಿತಿಗಾಗಿ ಶಾಖೆ ವ್ಯವಸ್ಥಾಪಕರು - ಅಥವಾ ಅಧಿಕೃತ ಅಧಿಕಾರಿಗಳನ್ನು 9712903626 ರಲ್ಲಿ ಸಂಪರ್ಕಿಸಿ

ದಿನಾಂಕ: 05-03-2026
ಸ್ಥಳ: ಹುಬ್ಬಳ್ಳಿ

ಸಹಿ/- ಅಧಿಕೃತ ಅಧಿಕಾರಿಗಳು
ಬ್ಯಾಂಕ್ ಆಫ್ ಬರೋಡ

ಜನಪದ ಹಾಡಿನ ಸ್ಪರ್ಧೆ ಭಾನುವಾರ

ಹುಬ್ಬಳ್ಳಿ: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಇಲ್ಲಿನ ವಿದ್ಯಾನಗರದ ಕನಕದಾಸ ಶಿಕ್ಷಣ ಸಂಸ್ಥೆಯ ಸಭಾಂಗಣದಲ್ಲಿ ಮಹಿಳಾ ಚುಟುಕು ಸಂಭ್ರಮವನ್ನು ಮಾ. 8ರಂದು ಬೆಳಗ್ಗೆ 10.30ಕ್ಕೆ ಆಯೋಜಿಸಲಾಗಿದೆ. ಜನಪದ ಹಾಡಿನ ಸ್ಪರ್ಧೆ ಏರ್ಪಡಿಸಲಾಗಿದ್ದು, ಕನಿಷ್ಠ ಇಬ್ಬರು ಹಾಗೂ ಗರಿಷ್ಠ 5 ಜನ ಭಾಗವಹಿಸಲು ಅವಕಾಶವಿದೆ. ಯಾವುದೇ ವಾದ್ಯಗಳನ್ನು ಬಳಕೆ ಮಾಡದೆ ಮೂಲ ಜನಪದ ಹಾಡುಗಳನ್ನು ಹಾಡಬೇಕು. ವಿಜೇತರಿಗೆ ಆಕರ್ಷಕ ನಗದು ಬಹುಮಾನ ನೀಡಲಾಗುವುದು ಎಂದು ಸಂಸ್ಥೆಯ ಪ್ರಸಾರಾಂಗ ನಿರ್ದೇಶಕ ಚನ್ನಬಸಪ್ಪ ಧಾರವಾಡಶೆಟ್ಟರ್ ತಿಳಿಸಿದ್ದಾರೆ.

ಕಾರಿನ ಗ್ಲಾಸ್ ಒಡೆದ ಕಿಡಿಗೇಡಿಗಳು

ಧಾರವಾಡ: ಕಿಡಿಗೇಡಿಗಳು ಕಾರಿಗೆ ಕಲ್ಲು ಹೊಡೆದು ಗ್ಲಾಸ್ ಪುಡಿ ಮಾಡಿದ ಘಟನೆ ನಗರದ ಮಾಳಮಡ್ಡಿಯ ಶ್ರೀ ವೆಂಕಟೇಶ್ವರ ದೇವಸ್ಥಾನದ ಬಳಿ ಗುರುವಾರ ತಡರಾತ್ರಿ ನಡೆದಿದೆ. ಮಾಳಮಡ್ಡಿ ನಿವಾಸಿ ಅಶೋಕ ಕಾಶಿಕರ ಎಂಬುವರ ಕಾರಿನ ಗ್ಲಾಸ್ ಒಡೆದ ಪುಂಡರು ಅಟ್ಟಹಾಸ ಮೆರೆದಿದ್ದಾರೆ. ಮನೆಗಳ ಮುಂದೆ ನಿಲ್ಲಿಸಿರುವ ವಾಹನಗಳ ಗ್ಲಾಸ್ ಒಡೆಯುವುದು ಇದೇ ಮೊದಲಲ್ಲ. ಪೊಲೀಸರು ಗಂಭೀರವಾಗಿ ಪರಿಗಣಿಸಿ, ಪುಂಡರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಅಶೋಕ ಕಾಶಿಕರ ಆಗ್ರಹಿಸಿದ್ದಾರೆ.

ದಾರಿಹೋಕರ ಮೇಲೆ ಹೆಜ್ಜೇನು ದಾಳಿ

ಧಾರವಾಡ: ರಸ್ತೆ ಬದಿ ನಡೆದು ಹೋಗುತ್ತಿದ್ದ ಜನರ ಮೇಲೆ ಹೆಜ್ಜೇನು ದಾಳಿ ನಡೆಸಿದ ಘಟನೆ ತಾಲೂಕಿನ ನರೇಂದ್ರ ಗ್ರಾಮದ ಬಳಿ ಗುರುವಾರ ಸಂಜೆ ನಡೆದಿದೆ. ಏಕಾಏಕಿ ಹೆಜ್ಜೇನು ದಾಳಿ ಮಾಡಿದ್ದರಿಂದ ಬೈಕ್ ಸವಾರರು ಮತ್ತು ಸಾರ್ವಜನಿಕರು ಸೇರಿ 15 ಜನ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಜಿಲ್ಲಾ ಆಸ್ಪತ್ರೆಗೆ ರವಾನಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ.

ನಂ.1 ಕನ್ನಡ ದಿನಪತ್ರಿಕೆ ವಿಜಯವಾಣಿ
ವಿದ್ಯಾರ್ಥಿ ಉದ್ಯೋಗ ಮಿತ್ರ
ಪ್ರತಿದಿನ ಓದಿರಿ

ಅಸಲ ದಾವಾ ನಂ. 55/2025
ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು ನವಲಗುಂದ ಇವರ ನ್ಯಾಯಾಲಯದಲ್ಲಿ

ವಾದಿ: ಶ್ರೀಮತಿ ಬಸವ್ವ ಕೋಂ. ಶಿದ್ದಪ್ಪ ಹೊಸಮನಿ

ವಿರುದ್ಧ

ಪ್ರತಿವಾದಿಯರು: 1) ಶ್ರೀಮತಿ ಯಲ್ಲವ್ವ ಕೋಂ, ಸಿದ್ದಪ್ಪ ಗುಣಕಾಲ ಹಾಗೂ ಇತರರು

ಪತ್ರಿಕಾ ಪ್ರಕಟಣೆ

ಮೇಲ್ಕಾಣಿಸಿದ ದಾವೆಯಲ್ಲಿ ವಾದಿಯು ಪ್ರತಿವಾದಿಯರ ವಿರುದ್ಧ ಅಸಲ ದಾವಾ ನಂ 55/2025 ದಾಖಲಿಸಿದ್ದು ಅದರಲ್ಲಿ ಈ ಕೆಳಗಿನ ಪ್ರತಿವಾದಿ ನಂ 2 ಮತ್ತು 5 ನೇದವರಿಗೆ ನೋಟಿಸ್ಸು ಜಾರಿಯಾಗಿರುವದಿಲ್ಲ ಕಾರಣ **ಪ್ರತಿವಾದಿ ನಂ 2 ಶ್ರೀಮತಿ ಗಂಗವ್ವ ಕೊಂ. ಸಿದ್ದಪ್ಪ ನಾಯ್ಕರ ಸಾ: ಯಡ್ರಾವಿ ತಾ: ಸವದತ್ತಿ, ಜಿಲ್ಲಾ: ಬೆಳಗಾವಿ ಹಾಗೂ ಪ್ರತಿವಾದಿ ನಂ 5 ಶ್ರೀಮತಿ ರೇಣವ್ವ ಕೋಂ. ಬಸಪ್ಪ ನಂದಿಕಟ್ಟಿ ಎಪಿಎಂಸಿ, ಧಾರವಾಡ ತಾ: ಜಿ: ಧಾರವಾಡ** ಇವರು ದಿನಾಂಕ: 08-04-2026 ರಂದು ಬೆಳಗ್ಗೆ 11 ಗಂಟೆಗೆ ಈ ಮೇಲ್ಕಾಣಿಸಿದ ನ್ಯಾಯಾಲಯಕ್ಕೆ ಸ್ವತಃ ಆಗಲಿ ಅಥವಾ ವಕೀಲರ ಮೂಲಕವಾಗಿ ಆಗಲಿ ಹಾಜರ ಆಗತಕ್ಕದ್ದು ಇದಕ್ಕೆ ತಪ್ಪಿದಲ್ಲಿ ಯಾರದೂ ತಕರಾರು ಇರುವದಿಲ್ಲ ಅಂತಾ ಏಕತರ್ಫಿ ಆದೇಶವನ್ನು ಮಾಡಲಾಗುವದು. ಈ ಸಾರ್ವಜನಿಕ ನೋಟೀಸು ಇಂದಿನ ದಿವಸ ದಿನಾಂಕ: 02-03-2026 ರಂದು ಮೆ॥ ನ್ಯಾಯಾಲಯದ ಮೊಹರನೊಂದಿಗೆ ಕೊಡಲ್ಪಟ್ಟಿದ್ದು ಇರುತ್ತದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- **ಶಿರಸ್ತೇದಾರರು**
ಮೆ॥ ಹಿರಿಯ ದಿವಾಣಿ ನ್ಯಾಯಾಧೀಶರ, ನ್ಯಾಯಾಲಯ, ನವಲಗುಂದ ಜಿಲ್ಲಾ: ಧಾರವಾಡ
ಸಹಿ/- **ಎ.ಎಲ್. ಜಾಂಬೋಟಿ**
ಅರ್ಜಿದಾರರ ಪರ ನ್ಯಾಯವಾದಿ, ನವಲಗುಂದ